# ಮೌಲ್ಯದ ಬಲದಿಂದ ಗೆದ್ದವನೇ
# ಮ್ಯಾನ್ ಆಫ್ ದಿ ಮ್ಯಾಚ್

**ಡಿ. ಸತ್ಯ ಪ್ರಕಾಶ್ ನಿರ್ದೇಶನದ 'ಮ್ಯಾನ್ ಆಫ್ ದಿ ಮ್ಯಾಚ್' ಸಿನಿಮಾ ಅಮೆಜಾನ್ ಪ್ರೈಮ್‌ನಲ್ಲಿ ಮೇ. 5ರಂದು ಬಿಡುಗಡೆಯಾಗುತ್ತಿದೆ. ಜನರು ಮೆಚ್ಚುವ ದಾರಿಯಲ್ಲಿಯೇ ಪ್ರಯೋಗಾತ್ಮಕ ಸಿನಿಮಾಗಳನ್ನು ಮಾಡಬೇಕು ಎಂಬ ಹಂಬಲದ ಸತ್ಯಪ್ರಕಾಶ್ ಜೊತೆಗಿನ ಮಾತುಕತೆ ಇಲ್ಲಿದೆ.**



◆ ಈ 'ಮ್ಯಾಚ್' ಶುರುವಾಗಿದ್ದು ಹೇಗೆ?

ಈ ಕಥೆ ತುಂಬ ಹಿಂದೆಯೇ ಮಾಡಿಕೊಂಡಿದ್ದು. ನನ್ನ ಮೊದಲ ಸಿನಿಮಾ ಇದೇ ಆಗಬೇಕಿತ್ತು. ಆದರೆ ಕಥೆಯ ಕುರಿತು ಚರ್ಚಿಸುತ್ತ ಹೋದಾಗ ಸಂಕೀರ್ಣ ಆಗುತ್ತಾ ಹೋಯಿತು. ಹಾಗಾಗಿ ಅದನ್ನು ಪಕ್ಕಕ್ಕಿಟ್ಟು 'ರಾಮಾ ರಾಮಾ ರೇ' ಮಾಡಿದ್ವಿ. ಆ ಸಿನಿಮಾ ಬಿಡುಗಡೆಯಾದ ಮೇಲೆ ಮತ್ತೆ ಈ ಸಿನಿಮಾನೇ ಮಾಡಬೇಕು ಎಂದು ಅಂದುಕೊಂಡಿದ್ದೆ. ಆಗಲೂ ಆಗಲಿಲ್ಲ. 'ಒಂದಲ್ಲಾ ಎರಡಲ್ಲಾ' ಸಿನಿಮಾ ಮಾಡಿದೆ. ನಂತರ ಇದನ್ನು ನಾನು ನಿರ್ಮಾಣ ಮಾಡಿ ಬೇರೆ ಯಾರಾದ್ರೂ ಹೊಸ ನಿರ್ದೇಶಕರಿಂದ ನಿರ್ದೇಶನ ಮಾಡಿಸೋಣ ಅಂದುಕೊಂಡೆ. ಆದರೆ ಎಲ್ಲರೂ ಕಥೆಯ ಒನ್ ಲೈನ್ ಕೇಳಿ ಇಷ್ಟಪಡುತ್ತಿದ್ದರು. ಆದರೆ ಪೂರ್ತಿ ಸ್ಕ್ರಿಪ್ಟ್ ಓದುತ್ತಿದ್ದ ಹಾಗೆಯೇ, ಇದು ತುಂಬ ವಿಚಿತ್ರವಾಗಿದೆ. ಹೇಗೆ ಮಾಡೋದು ಗೊತ್ತಾಗ್ತಿಲ್ಲ ಎಂದು ಹೇಳಿ ಹೋಗುತ್ತಿದ್ದರು.

ಈ ಮಧ್ಯೆ ನಾನು ಪುನೀತ್ ರಾಜ್‌ಕುಮಾರ್ ಅವರ ಸಿನಿಮಾ ನಿರ್ದೇಶನ ಮಾಡಬೇಕಿತ್ತು. ಕೋವಿಡ್ ಕಾರಣದಿಂದ ಅದು ಮುಂದಕ್ಕೆ ಹೋಯಿತು. ಆ ಹೊತ್ತಿನಲ್ಲಿಯೇ ನಾನು ಪುನೀತ್ ಅವರ ಬಳಿ ಈ ಕಥೆಯ ಒನ್‌ಲೈನ್ ಹೇಳಿದ. ಅದನ್ನು ಕೇಳಿ ಅವರು ತುಂಬ ಎಕ್ಸೈಟ್ ಆದರು. 'ಇದು ತುಂಬ ಬೇರೆ ಥರದ ಸಿನಿಮಾ ಆಗುತ್ತದೆ. ನೀವು ಮಾಡಿ. ನಾನು ನಿಮ್ ಜೊತೆಗಿರ್ತೀನಿ' ಅಂದರು. ನಂತರ ಮತ್ತೊಮ್ಮೆ ಇಡೀ ಕಥೆಯನ್ನು ಇಟ್ಟುಕೊಂಡು ಡಿಸ್ಕಶನ್ ಮಾಡಿ, ಹಲವು ಹೊಸ ಆಯಾಮಗಳನ್ನು ಸೇರಿಸಿದೆವು. ಆಗ ನಾನೇ ಈ ಸಿನಿಮಾ ನಿರ್ದೇಶನ ಮಾಡಲು ನಿರ್ಧರಿಸಿದೆ. '...ಮ್ಯಾಚ್' ಶುರುವಾಗಿದ್ದು ಹೀಗೆ.

◆ ನಿಮ್ಮ ಸಿನಿಮಾಗಳಲ್ಲಿ ಹೊಸಬರೇ ಇರುತ್ತಾರಲ್ಲಾ?

ಬಹುಶಃ ನಾನು ನಿರ್ದೇಶಿಸಿರುವ ಸಿನಿಮಾದ ಕಥೆಗಳೇ ಹಾಗಿದ್ದವು. 'ರಾಮಾ ರಾಮಾ ರೇ' ಸಿನಿಮಾವನ್ನು ಯಾವುದಾದರೂ ದೊಡ್ಡ ಹೀರೊಗೆ ಮಾಡಬೇಕು ಎಂದುಕೊಂಡಿದ್ದೆ. ಆದರೆ ಕಥೆ ಕೇಳಿದ ನಿರ್ಮಾಪಕರೆಲ್ಲರೂ ಹಿಂದೇಟು ಹಾಕಿದರು. ಅನಿವಾರ್ಯವಾಗಿ ಹೊಸಬರನ್ನು ಹಾಕಿಕೊಂಡು ನಾನೇ ಮಾಡಿದೆ. 'ಒಂದಲ್ಲಾ ಎರಡಲ್ಲಾ' ಸಿನಿಮಾವನ್ನು ಯಾವ ಸ್ಟಾರ್ ನಟನ ಜೊತೆಗೂ ಮಾಡುವುದೂ ಸಾಧ್ಯವೇ ಇರಲಿಲ್ಲ. ಯಾಕೆಂದರೆ ಆ ಕಥೆಯೇ ಹಾಗಿತ್ತು. 'ಮ್ಯಾನ್ ಆಫ್ ದಿ ಮ್ಯಾಚ್' ಕೂಡ ಅಷ್ಟೆ. ಇದು ಸಿನಿಮಾ ಆಡಿಷನ್ ಮೇಲೆಯೇ ನಡೆಯುವ ಕಥೆ. ಸಿನಿಮಾ ಆಡಿಷನ್ ಕೊಡಲು ಹೊಸಬರೇ ಬರುತ್ತಾರಲ್ಲವಾ? ಹಾಗಾಗಿ ಹೊಸಬರನ್ನೇ ಹಾಕಿಕೊಂಡು ಮಾಡಬೇಕಾಯ್ತು. ಹಾಗೆಂದು ಬರೀ ಹೊಸಬರಿಗೇ ಸಿನಿಮಾ ಮಾಡಬೇಕು ಎಂದೇನೂ ನಾನು ಅಂದುಕೊಂಡಿಲ್ಲ. ಸ್ಟಾರ್ ನಟರಿಗೂ ಸಿನಿಮಾ ನಿರ್ದೇಶಿಸುತ್ತೇನೆ.

◆ ಈ ಸಿನಿಮಾದ ಜೊತೆಗೆ ಪುನೀತ್ ರಾಜ್‌ಕುಮಾರ್ ಅವರ ಒಡನಾಟ ಹೇಗಿತ್ತು?

ಐಡಿಯಾ ಚೆನ್ನಾಗಿದೆ ಅಂತ ಅನಿಸಿದ ತಕ್ಷಣ ತುಂಬ ಖುಷಿಯಾಗಿ ನಮ್ಮ ಜೊತೆಗೆ ಕೈಜೋಡಿಸಲು ಮುಂದೆ ಬಂದರು. ಈ ಸಿನಿಮಾದಲ್ಲಿನ ಯಾವುದೋ ಅಂಶ ಅವರಲ್ಲಿ ನಂಬಿಕೆ ಹುಟ್ಟಿಸಿತ್ತು. ಅವರಿಗೆ ಸಿನಿಮಾ ನೋಡಬೇಕು ಎಂದು ತುಂಬ ಆಸೆ ಇತ್ತು. ಆದರೆ ಸಾಧ್ಯವಾಗಲಿಲ್ಲ. ಆದರೆ ಒಂದು ಹಾಡು ನೋಡಿದ್ದರು. ಟ್ರೇಲರ್ ನೋಡಿದ್ದರು. ಕೆಲವು ವಿಷುವಲ್ಸ್ ನೋಡಿದ್ದರು. ಎಲ್ಲವೂ ಅವರಿಗೆ ಖುಷಿಕೊಟ್ಟಿತ್ತು. ಒಮ್ಮೆ ಸೆಟ್‌ಗೂ ಬಂದಿದ್ದರು. ಆಗ ಟ್ರೇಲರ್‌ನಲ್ಲಿ ನೋಡಿದ ನಟರನ್ನೆಲ್ಲ ಗುರ್ತು ಹಿಡಿದು ಮಾತಾಡಿಸುತ್ತಿದ್ದರು. 'ಜನ ಹೇಗೆ ಸ್ವೀಕರಿಸುತ್ತಾರೆ ಎಂಬುದರ ಬಗ್ಗೆ ತುಂಬ ಯೋಚನೆ ಮಾಡದೆ ಪ್ರಯೋಗಗಳನ್ನು ಮಾಡುತ್ತ ಹೋಗೋಣ. ಯಾವುದೋ ಹಂತದಲ್ಲಿ ಖಂಡಿತ ಜನರಿಗೆ ಅದು ಇಷ್ಟವಾಗುತ್ತದೆ. ಹೊಸ ಪ್ರಯತ್ನಗಳನ್ನು ನಾವು ಮಾಡುತ್ತಲೇ ಇರಬೇಕು' ಎಂದು ಅವರು ಹೇಳುತ್ತಿದ್ದರು. ಅವರ ಆ ನಂಬಿಕೆಯ ಮೇಲೆಯೇ ನಮ್ಮ